**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ .**

**<u>ಸಿ.ಸಿ ನಂಃ 42 / 2017</u>**

| | | |
|---|---|---|
| ಸಾಕ್ಷಿಯ ಹೆಸರಃ | ಮಹೇಶ ಎಮ್. | ಫ್ರಾಸಾಃ 6 |
| ತಂದೆ/ಗಂಡನ ಹೆಸರುಃ | ಮಹದೇವಯ್ಯ | ಚಾಸಾಃ 11 |
| ವಯಸ್ಸುಃ | 41 ವರ್ಷ | ದಿಃ 15-07-2025 |
| ಉದ್ಯೋಗಃ | ಪಿ.ಐ. ಪೋಲಿಸ್ ಟ್ರೈನಿಂಗ್ ಸ್ಕೂಲ್ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಮೈಸೂರು | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>**

ನಾನು ಅಗಸ್ಟ್ 2016 ರಿಂದ ಆಗಸ್ಟ 2019 ರವರೆಗೆ ಪಿ.ಎಸ್.ಐ. ಅಂತಾ ಸಾಲಿಗ್ರಾಮ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 19.08.2016 ರಂದು ನಾನು ಈ ಪ್ರಕರಣದ ಕಡತವನ್ನು ನಾನು ಚಾಸಾಃ 10 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ಚಾಸಾ-1 ರವರ ಕರ್ತವ್ಯ ದೃಡೀಕರಣ ಪತ್ರವನ್ನು ಚಾಸಾ-9 ರವರಿಂದ ಪಡೆದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ 14.09.2016 ರಂದು ಈ ಪ್ರಕರಣದ ಆರೋಪಿತರು ನೀರಿಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು, ಸೂಕ್ತ ಜಾಮೀನಿನ ಮೇಲೆ ಆರೋಪಿತರನ್ನು ದಸ್ತುಗಿರಿ ಕ್ರಮ ಜರುಗಿಸಿ ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 23.11.2016 ರಂದು ದಿನ ಚಾಸಾ-2 ಮತ್ತು 3 ರವರ ಕರ್ತವ್ಯ ದೃಡೀಕರಣ ಪತ್ರವನ್ನು ಮತ್ತು F.O.C. ಪ್ರತಿಯನ್ನು ಪಡೆದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸಮಗ್ರ ತನಿಖೆಯನ್ನು ಪೂರೈಸಿ ಮೇಲ್ನೋಟಕ್ಕೆ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನಾನು ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಚಾಸಾ-1 ರಿಂದ 3 ರವರ ಕರ್ತವ್ಯ ದೃಡೀಕರಣ ಪತ್ರವನ್ನು ನಿಪಿ.5 ರಿಂದ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಯಿಂದ 7(ಎ) ಎಂದು, F.O.C. ಪ್ರತಿಯನ್ನು ನಿಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಶ್ರೀ.ಪಿ.ಡಿ. ವಕೀಲರಿಂದ ಃ**

ನಿಪಿ.8 ರಲ್ಲಿ ಆರೋಪಿತರುಗಳ ಹೆಸರುಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಇರುವ ವಿಳಂಬದ ಬಗ್ಗೆ ನಾನು ತನಿಖೆ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.8 ರ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮುದ್ದೆ ಮಾಲುಗಳ ವಿವರಗಳನ್ನು ನಾನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.8 ರ ಪ್ರಕರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಚಾಸಾ-1 ರಿಂದ ಚಾಸಾ-3 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದೋಷಾಪರೋಪಣ ಪಟ್ಟಿಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.ನಾನು ಸ್ಥಳ ತನಿಖೆಯನ್ನು ಮಾಡಿರುವುದಿಲ್ಲ ಮತ್ತು ಸಾಕ್ಷಿದಾರರ ಹೇಳಿಕೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸತ್ಯ ಸತ್ಯತೆಯನ್ನು ಪರಿಶೀಲಿಸದೇ ನ್ಯಾಯಾಲಯಕ್ಕೆ ಸುಳ್ಳು ದೋಷಾಪರೋಪಣ ಪಟ್ಟಿಯನ್ನು ತಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**